ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಕಛೇರಿ, ನೃಪತುಂಗರಸ್ತೆ, ಬೆಂಗಳೂರು – 560001**

ಸಂಖ್ಯೆ:ಸಿ4(6),ಶೈ.ಮತ್ತುರಜೆ ಅವಧಿ.ನಿಗ–50 2019–20 ದಿನಾಂಕ: 11.02.2020

–: ಜ್ಞಾಪನ :–

**ವಿಷಯ:** 2020–21ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶೈಕ್ಷಣಿಕ ಅವಧಿಗಳು ಮತ್ತು ರಜಾ ಅವಧಿಗಳನ್ನು ನಿಗದಿಪಡಿಸುವ ಬಗ್ಗೆ

@ @ @ @ @

2020–21ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶೈಕ್ಷಣಿಕ ಅವಧಿ, ಮಧ್ಯಂತರ ರಜೆ ಹಾಗೂ ಬೇಸಿಗೆ ರಜೆಗಳನ್ನು ಕೆಳಗಿನ ನಿಬಂಧನೆಗಳಿಗೆ ಒಳಪಟ್ಟು ನಿಗಧಿಪಡಿಸಿ ಆದೇಶಿಸಿದೆ.

| ಶಾಲಾ ದಿನಗಳ ವಿವರ | | |
|---|---|---|
| ಅವಧಿ | ಮೊದಲನೇ ಅವಧಿ | ದಿನಾಂಕ: 29.05.2020 ರಿಂದ 02.10.2020 |
| | ಎರಡನೇ ಅವಧಿ | ದಿನಾಂಕ: 26.10.2020 ರಿಂದ 14.04.2021 |
| ರಜಾ ಅವಧಿಗಳು | | |
| ಅವಧಿ | ಮಧ್ಯಂತರ ಅವಧಿ | ದಿನಾಂಕ: 03.10.2020 ರಿಂದ 25.10.2020 |
| | ಬೇಸಿಗೆ ರಜೆ | ದಿನಾಂಕ: 15.04.2021 ರಿಂದ 29.05.2021 |

ಮೇಲಿನ ಶಾಲಾ ಕರ್ತವ್ಯ ನಿರತ ಮತ್ತು ರಜೆಯ ಅವಧಿಯನ್ನು ಪರಿಗಣಿಸಿದಂತೆ 2020–21 ನೇ ಸಾಲಿನ ಶೈಕ್ಷಣಿಕ ಸಾಲಿನ ರಜೆ ಹಾಗೂ ಭೋಧನಾ ದಿನಗಳು

| ಕ್ರಸಂ | ತಿಂಗಳು | ಶೈಕ್ಷಣಿಕ ವರ್ಷದ ಒಟ್ಟು ದಿನಗಳು | ಒಟ್ಟು ರಜೆಗಳು | ಲಭ್ಯವಿರುವ ಶಾಲಾ ದಿನಗಳು |
|---|---|---|---|---|
| 01 | ಮೇ/2020 | 03 | 01 | 02 |
| 02 | ಜೂನ್/2020 | 30 | 04 | 26 |
| 03 | ಜುಲೈ/2020 | 31 | 04 | 27 |
| 04 | ಆಗಸ್ಟ್/2020 | 31 | 07 | 24 |
| 05 | ಸೆಪ್ಟೆಂಬರ್/2020 | 30 | 05 | 25 |
| 06 | ಅಕ್ಟೋಬರ್/2020 | 31 | 26 | 05 |
| 07 | ನವಂಬರ್/2020 | 30 | 07 | 23 |
| 08 | ಡಿಸೆಂಬರ್/2020 | 31 | 06 | 25 |
| 09 | ಜನವರಿ/2021 | 31 | 06 | 25 |
| 10 | ಫೆಬ್ರವರಿ/2021 | 28 | 04 | 24 |
| 11 | ಮಾರ್ಚ್2021 | 31 | 05 | 26 |
| 12 | ಏಪ್ರಿಲ್/2021 | 14 | 02 | 12 |
| | ಒಟ್ಟು | **321** | **77** | **244** |
| **ವಿವೇಚನಾ ರಜೆಗಳು** | | | **04** | **–04** |
| **ಒಟ್ಟು ಬೋಧನಾ ದಿನಗಳು** | | | | **240** |

**ನಿಬಂಧನೆಗಳು:–**

1. ಪ್ರಾಥಮಿಕ ಶಾಲಾ ಶಿಕ್ಷಣದ ಸಮುದಾಯದತ್ತ ಶಾಲಾ ಕಾರ್ಯಕ್ರಮವನ್ನು ದಿನಾಂಕ: 13.04.2021ರಂದು ನಡೆಸುವುದು.
2. ದಿನಾಂಕ:14.04.2021 ರಂದು ಪ್ರೌಢ ಶಾಲಾ ಶಿಕ್ಷಣದ ಸಮುದಾಯದತ್ತ ಶಾಲಾ ಕಾರ್ಯಕ್ರಮವನ್ನು ಆಚರಿಸುವುದು.ದಿನಾಂಕ: 14.04.2021ರಂದು ಡಾ॥ ಬಿ.ಆರ್ಅಂಬೇಡ್ಕರ್ ಜಯಂತಿಯನ್ನು ಎಲ್ಲಾ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯಶಿಕ್ಷಕರು, ಸಹಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರು ವಿದ್ಯಾರ್ಥಿಗಳೊಂದಿಗೆ ಕಡ್ಡಾಯವಾಗಿ ಆಚರಿಸಬೇಕು.
3. ಕ್ರಿಸ್‌ಮಸ್ ರಜೆ ಬೇಡಿಕೆಯನ್ನು ಸಂಬಂಧಿಸಿದ ಸಂಸ್ಥೆಗಳು ಆಯಾ ವ್ಯಾಪ್ತಿಯ ಉಪನಿರ್ದೇಶಕರುಗಳಿಗೆ ಸಲ್ಲಿಸಿದ್ದಲ್ಲಿ ಈ ಬಗ್ಗೆ ಆಯಾ ಉಪನಿರ್ದೇಶಕರುಗಳು ಪರಿಶೀಲಿಸಿ, ಡಿಸೆಂಬರ್ ಮಾಹೆಯಲ್ಲಿ ನೀಡುವ ಕ್ರಿಸ್‌ಮಸ್ ರಜಾ

ಅವಧಿಯನ್ನು ಅಕ್ಟೋಬರ್ ಮಾಹೆಯ ಮಧ್ಯಂತರ ರಜೆಯಲ್ಲಿ ಕಡಿತಗೊಳಿಸಿ ಸರಿದೂಗಿಸಿಕೊಳ್ಳತಕ್ಕದ್ದು.

4. ರಾಜ್ಯ ಮಟ್ಟದ ಕನ್ನಡರಾಜ್ಯೋತ್ಸವ ಮತ್ತು ಮಕ್ಕಳ ಮೇಳ ಕಾರ್ಯಕ್ರಮಗಳನ್ನು ಆಯೋಜಿಸುವ ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಗಳ ಉಪನಿರ್ದೇಶಕರುಗಳು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಮಧ್ಯಂತರ ರಜಾ ಅವಧಿಯನ್ನು ಅವಶ್ಯಕತೆಗನುಗುಣವಾಗಿ ಮಾರ್ಪಡಿಸಿಕೊಳ್ಳುವ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಶೈಕ್ಷಣಿಕ ಕರ್ತವ್ಯದ ಅವಧಿಗಳ ಕೊರತೆ ಬಾರದ ರೀತ್ಯಾ ಕ್ರಮ ಮಾಡತಕ್ಕದ್ದು.
5. ನಿಗದಿಪಡಿಸಿದ ಶೈಕ್ಷಣಿಕ ಶಾಲಾ ಕರ್ತವ್ಯದ ಅವಧಿಗಳು ಕಡಿಮೆಯಾಗದಂತೆ ಮುಷ್ಕರ ಇನ್ನಿತರೆ ಅನಿರೀಕ್ಷಿತ ಕಾರಣಗಳಿಂದಾಗಿ ರಜೆ ಘೋಷಣೆಯಾದಲ್ಲಿ ಆ ಅವಧಿಯ ಶಾಲಾ ಕರ್ತವ್ಯದ ದಿನಗಳನ್ನು ಮುಂದಿನ ರಜಾ ದಿನಗಳಲ್ಲಿ ಪೂರ್ಣ ದಿನ ಶಾಲೆಗಳನ್ನು ನಡೆಸಿ ಶಾಲಾ ಕರ್ತವ್ಯದ ದಿನಗಳನ್ನು ಸರಿದೂಗಿಕೊಳ್ಳಲು ಉಪನಿರ್ದೇಶಕರು ಕ್ರಮ ವಹಿಸುವುದು.
6. ರಾಷ್ಟ್ರೀಯ ಹಬ್ಬಗಳಾದ ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ನಾಡಹಬ್ಬವಾದ ಕರ್ನಾಟಕರಾಜ್ಯೋತ್ಸವ ದಿನಾಚರಣೆಯನ್ನು ಮತ್ತು ಮಹಾತ್ಮ ಗಾಂಧೀಜಿಯವರ ಜಯಂತಿಯನ್ನು ಆಯಾ ದಿನಾಂಕಗಳಂದು ಕಡ್ಡಾಯವಾಗಿ ಆಚರಿಸುವುದು.

**ಸೂಚನೆ:-ಪರೀಕ್ಷಾ ದಿನಗಳನ್ನು ಕೂಡಾ ಶಾಲಾ ದಿನಗಳೆಂದು ಪರಿಗಣಿಸುವುದು.**

**[ಡಾ॥.ಕೆ.ಜಿ.ಜಗದೀಶ] ಭಾ.ಆ.ಸೇ**

**ಆಯುಕ್ತರು**

<u>**ಇವರಿಗೆ:-**</u>

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ/ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ. ಇವರಿಗೆ ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ. ಇವರಿಗೆ ಮುಂದಿನ ಕ್ರಮಕ್ಕಾಗಿ.

**ಪ್ರತಿಯನ್ನು:-**

1. ಮಾನ್ಯ ಘನತೆವೆತ್ತ ರಾಜ್ಯಪಾಲರ ಆಪ್ತ ಕಾರ್ಯದರ್ಶಿ ರವರಿಗೆ.
2. ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಕೊಠಡಿ ಸಂಖ್ಯೆ262/262ಎ ವಿಧಾನಸೌಧ 2ನೇ ಮಹಡಿ ಬೆಂಗಳೂರು-01ರವರಿಗೆ.
3. ಮಾನ್ಯ ಸರ್ಕಾರದ ಪ್ರದಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು ರವರಿಗೆ.
4. ರಾಜ್ಯ ಯೋಜನಾ ನಿರ್ದೇಶಕರು ಎಸ್.ಎಸ್.ಎ/ಆರ್.ಎಂ.ಎಸ್.ಎ ನೃಪತುಂಗರಸ್ತೆ ಬೆಂಗಳೂರು ರವರಿಗೆ.
5. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ/ಕಲಬುರಗಿರವರಿಗೆ ಸೂಕ್ತ ಕ್ರಮಕ್ಕಾಗಿ.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳಿಗೆ.
8. ಸಹನಿರ್ದೇಶಕರು ಮಧ್ಯಾಹ್ನಉಪಹಾರಯೋಜನೆ ಬೆಂಗಳೂರು ರವರಿಗೆ.
9. ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರಾಂಶುಪಾಲರ ಮತ್ತು ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಂಘ ಬೆಂಗಳೂರು.
10. ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹಶಿಕ್ಷಕರ ಸಂಘ ಬೆಂಗಳೂರು.
11. ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಬೆಂಗಳೂರು.
12. ಸಾರ್ವಜನಿಕ ಸಂಪರ್ಕಾಧಿಕಾರಿಗಳು ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು.
13. ಕಛೇರಿ ಪ್ರತಿ.